ಸಾಕ್ಷಿಯನ್ನು ದಿಃ 30-07-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ವಿ.ಎಸ್.ಪಿ.ಪಿ ಪ್ರತಿವಾದಿ ಪರ ವಕೀಲರಿಂದ

ನಾನು ಸೊರಬಪ್ಪನ ವಾರಸುದಾರನು ಇರುತ್ತೇನೆ. ಗುರುಪಾದಪ್ಪನ ವಾರಸುದಾರರು ಇರುವುದಿಲ್ಲ ಎಂದರೆ ಸರಿಯಲ್ಲ. ಸೊರಬಪ್ಪನ ಹೆಸರಿನಲ್ಲಿ ಪಿತ್ರಾರ್ಜಿತ ಆಸ್ತಿಗಳು ಇದ್ದವು. ಗುರುಪಾದಪ್ಪನ ಹೆಸರಿನಲ್ಲಿಯೂ ಸಹ ಪಿತ್ರಾರ್ಜಿತ ಆಸ್ತಿ ಇದ್ದು ಅದು ಅವರು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಸರ್ವೆ ನಂ. 26/2 ಅ ನಮಗೆ ಸೇರಿದ ಜಮೀನು ಇರುತ್ತದೆ. ಸದರಿ ಆಸ್ತಿ ಸಹ ನಮ್ಮ ಪಿತ್ರಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿ. ಸದರಿ ಜಮೀನು ಮಲ್ಲಯ್ಯ ಎನ್ನುವವರಿಗೆ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ಇನ್ನು ಬೇರೆ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ಅದರ ಸರ್ವೆ ನಂ. 33/ಎ ಆಗಿರುತ್ತದೆ. ಅದು 2 ಎಕರೆ ಚಿಲ್ಲರೆ ವಿಸ್ತೀರ್ಣ ಹೊಂದಿರುತ್ತದೆ. ಸದರಿ ಜಮೀನಿನಲ್ಲಿ ಗುರುಪಾದಪ್ಪನಿಗೆ ಯಾವುದೇ ಪಾಲು ಬಂದಿರುವುದಿಲ್ಲ.

2.ಗುರುಪಾದಪ್ಪ 1985 ರಲ್ಲಿ ಮೃತಪಟ್ಟಿದ್ದು ಅದು ಆದ ನಂತರ ದಾವಾ ಆಸ್ತಿಗಳ ಕಂದಾಯ ದಾಖಲೆಗಳಲ್ಲಿ ಹೆಸರು ಬದಲಾವಣೆಗೆ ಇಂದಿವರೆಗೂ ಅರ್ಜಿ ನೀಡಿರುವುದಿಲ್ಲ. ಗುರುಪಾದಪ್ಪ ಮೃತ ಪಟ್ಟ ನಂತರ ಕಂದಾಯ ದಾಖಲೆಗಳನ್ನು ಇಂದಿವರೆಗೂ ನೋಡಿರುವುದಿಲ್ಲ ಎಂದರೆ ಸರಿ. ನನಗೂ ಮತ್ತು ಗುರುಪಾದಪ್ಪನಿಗೆ ಯಾವುದೇ ಸಂಬಂದ ಇಲ್ಲದಿದ್ದರೂ ಸುಳ್ಳು ದಾಖಲೆಗಳೊಂದಿಗೆ ಪ್ರತಿವಾದಿ ನಂ. 1 ಮತ್ತು 2 ರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. 1985 ರಿಂದ ಇಂದಿವರೆಗೂ ದಾವಾ ಆಸ್ತಿಯ ಮಾಲೀಕರು ಎಂದು ಸಾಬೀತುಪಡಿಸುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ದಾವಾ

ಆಸ್ತಿಯ ಸ್ವಾಧೀನಾನುಭದಲ್ಲಿ ಇದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ ಬಗ್ಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ ನಂ. 1 ಮತ್ತು 2 ದಾವಾ ಆಸ್ತಿಗಳ ದಾಖಲೆಗಳಲ್ಲಿ ಯಾವ ಆಧಾರದ ಮುಖಾಂತರ ಬಂದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಹಾಗೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದೆನೆಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ಟೆನನ್ಸಿ ಕಾಯ್ದೆಯಡಿ ದಾವಾ ಬಂದಿರುತ್ತದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಸೃಷ್ಟಿ ಮಾಡಿ ಪಡೆದುಕೊಂಡಿರುತ್ತಾರೆಂದು ನುಡಿಯುತ್ತಾರೆ. ಭೂ ನ್ಯಾಯ ಮಂಡಳಿಯು ಪ್ರತಿವಾದಿ ನಂ. 1 ಮತ್ತು 2 ರ ಆದೇಶ ಮಾಡಿರುತ್ತಾರೆಂದರೆ ಸಾಕ್ಷಿಯು ಎಲ್ಲವೂ ಸೃಷ್ಟಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನಿಪಿ-1 ರಿಂದ 3 ರ ವರೆಗಿನ ದಾಖಲೆಗಳ ಪ್ರಕಾರ 1 ಮತ್ತು 2 ಪ್ರತಿವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ದಾವಾ ಆಸ್ತಿ ಗುರುಪಾದಪ್ಪನ ಹೆಸರಿಗೆ ಮಂಜೂರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನದಲ್ಲಿ ನಾನು ಇದ್ದು ಸಾಗುವಳಿ ಮಾಡುತ್ತಿದ್ದೆನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಪ್ರತಿವಾದಿ ನಂ. 1 ಮತ್ತು 2 ವಡವಿ ಊರಿನಲ್ಲಿ ಸುಮಾರು 20 ವರ್ಷದಿಂದ ವಾಸ ಇರುತ್ತಾರೆ.

3. ಪ್ರತಿವಾದಿ ನಂ. 1 ಮತ್ತು 2 ಯರು ದಾವಾ ಆಸ್ತಿಯ ಸ್ವಾಧೀನ ದಲ್ಲಿ ಇದ್ದು ಸಾಲ ಪಡೆದುಕೊಂಡು ಸಾಗುವಳಿ ಮಾಡುತ್ತಿರುತ್ತಾರೆಂದರೆ ಸರಿಯಲ್ಲ. ವಾರಸಾ ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಪ್ರಕಾರ ಕೊಡುತ್ತಾರೆಂದರೆ ಸರಿ.. ವಾರಸಾ ಪ್ರಮಾಣ ಪತ್ರವನ್ನು ಕೇಸಿಗೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ಇತರೇ ಪ್ರತಿವಾದಿಗಳೊಂದಿಗೆ ಸೇರಿಕೊಂಡು ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯೂ ಮತ್ತು ನಮ್ಮ ಇತರೇ ಆಸ್ತಿಗಳು ಒಂದಕ್ಕೊಂದು ಹತ್ತಿಕೊಂಡು ಇರುತ್ತವೆ ಎಂದರೆ ಸರಿ.

ದಾವಾ ಆಸ್ತಿಯನ್ನು ಒತ್ತುವರಿ ಮಾಡಲು ಪ್ರಯತ್ನ ಪಟ್ಟಿರುತ್ತೇವೆಂದರೆ ಸರಿಯಲ್ಲ. ಈ ವಿಚಾರವಾಗಿ ಕ್ರಿಮಿನಲ್ ಮೊಕದಮ್ಮೆ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಸರಿ. ಪ್ರಕರಣಕ್ಕೆ ಅನುಕೂಲವಾಗುವಂತೆ ವಾದ ಪತ್ರ ಸಾಕ್ಷಿಯನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ ಗುರುಪಾದಪ್ಪನಿಗೆ ದಾವಾ ಆಸ್ತಿಯು ಟೆನನ್ಸಿ ಕಾಯ್ದೆಯಲ್ಲಿ ಬಂದಿರುತ್ತದೆ ಎಂದು ಎಲ್ಲಿಯೂ ಲಿಖಿತ ಆದೇಶ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-30.07.2025
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂ. ಲಕ್ಷ್ಮೇಶ್ವರ

ಸಾಕ್ಷಿದಾರರ ಸಹಿಃ sd/-